ಯಾರಾದರೂ ಒಂದು ನಾಲ್ಕು ಸಂತೃಕೆಯ ಮಾತಾಡಿದರೆ ಎಷ್ಟು ಚೆನ್ನಾಗಿರುತ್ತೆ ಅನಿಸುತ್ತೆ. ಮಾತಾಡಿಸೋಕೆ ನಮ್ಮಕ್ಕ ಬಂದಳು. ಆದರೆ ನಾಲ್ಕೆಂದರೆ ನಾಲ್ಕೇ ದಿನ ಇದ್ದು ಲೀವ್‌ಗಳಿಲ್ಲ ಅಂತ ಹೊರಟುಹೋದಳು. ಇನ್ನು ನನಗೆ ಜೊತೆ ಯಾರು? ನಮ್ಮ ಚಿನ್ನು. ಆ ಸಮಯದಲ್ಲಿ ನನಗೆ ಅವನ ಪ್ರೀತಿಯೇ ಎಲ್ಲದಕ್ಕಿಂತ ಮುಖ್ಯ ಅನಿಸಿತು. ಅದೇ ನನಗೆ ಸಂಜೀವಿನಿ. ಅದೇ ನನ್ನ ಪಾಲಿನ ದೊಡ್ಡ ನಿಧಿ. ಆದರೆ ಆ ನಿಧಿಯನ್ನು ಎಂದೋ ಕಳೆದುಕೊಂಡಿದೀನಿ ಅಂತ ಆಗ ಗೊತ್ತಾಗಲಿಲ್ಲ ನನಗೆ' ಅಂದು ನಿಲ್ಲಿಸಿದಳಾಕೆ.

ಆಕೆಯ ಗ್ಲಾಸಿನಲ್ಲಿನ ಡ್ರಿಂಕು ಮುಗಿದುಹೋಗಿತ್ತು.

ಮತ್ತೊಂದ್ಸಲ ಹಾಕಿಕೊಂಡು ಒಂದು ಕ್ಷಣ ಕೂಡ ವೇಸ್ಟ್ ಮಾಡದೆ ತಕ್ಷಣವೇ ಗಂಟಲೊಳಗೆ ಸುರಿದುಕೊಂಡಳು.

ಅಷ್ಟೊತ್ತಿಗಾಗಲೇ ಆಕೆ ಅರ್ಧ ಬಾಟಲಿ ಖಾಲಿ ಮಾಡಿ ಹಾಕಿದ್ದಳು. ಉಳಿದರ್ಧ ಕೂಡ ಖಾಲಿ ಮಾಡಿಬಿಡುವಂತೆ ಕಾಣಿಸಿದಳು. ನೀವು ಹೆಚ್ಚಿಗೆ ತಗೊಳ್ತಾ ಇದ್ದೀರಿ ಅಂದೆ ನಸುಗುತ್ತ.

'ಪರವಾಗಿಲ್ಲ ಬಿಡಿ. ಇದೇನು ಹೆಚ್ಚಲ್ಲ. ಇದೇ ಇಲ್ದಿರದಿದ್ದರೆ ಇಷ್ಟೊತ್ತಿಗೆ ಸತ್ತು ಹೋಗಿರ್ತಿದ್ದೆ. ಇನ್‌ಫ್ಯಾಕ್ಟ್ ಮೊಬೈಲ್ ಫೋನ್‌ಗಳು ಬಂದು ಎಂದೋ ನನ್ನ ಸಾಯಿಸಿದ್ದು ಅಂದ್ಕೊಳ್ಳಿ. ಅವು ನನ್ನನ್ನು ನನ್ನ ಗಂಡನನ್ನು ನನ್ನ ಮಗನನ್ನು ಮೂರು ತುಕಡಿ ಮಾಡಿಹಾಕಿದವು. ನನ್ನ ಗಂಡ ರಿಯಾದ್‌ಗೆ ಹೋದ ಮೇಲೆ ನನಗೆ ಆ ವ್ಯತ್ಯಾಸ ಗೊತ್ತಾಯಿತು. ನಮ್ಮ ಮೂವರ ಮಧ್ಯೆ ಕೂಡು ಮಾತುಕತೆಗಳೇ ಇಲ್ಲ. ಆದರೆ ನಾನು ನನ್ನ ಮನೆಯವರು ಮಾತಾಡಿಕೊಳ್ತೀವಿ. ಇಲ್ಲಾಂದರೆ ಅವರು ಚಿನ್ನು ಮಾತಾಡಿಕೊಳ್ತಾರೆ ಅಷ್ಟೇ. ಅದಕ್ಕೇ ನಮ್ಮ ಮಧ್ಯೆ ಏನಾಗ್ತಿದೆ ಅಂತ ನನಗೆ ಅರ್ಥವೇ ಆಗ್ಲಿಲ್ಲ. ಅವನು ನಿಧನಿಧಾನವಾಗಿ ನನ್ನಿಂದ ದೂರ ಸರಿಯುತ್ತಿದ್ದಾನೆಂಬ ಸಂಗತಿಯನ್ನೇ ನಾನು ಊಹಿಸದವಳಾದೆ.

ಈ ಬದಲಾವಣೆ ಮೊದಲೇ ಶುರುವಾಗಿರಬೇಕು. ನನ್ನ ಗಂಡ ರಿಯಾದ್‌ಗೆ ಹೋದ ಮೇಲೆ ಅದು ಹೆಚ್ಚಾಗಿರುತ್ತೆ. ಅವರು ಕೆಲಸಗೇಡಿಯಾಗಿ ಅವನಿಗೆ ಏನಾದರೂ ಹೇಳಿರ್ತಾನೆ ಅಂತ ನನಗೆ ಅನಿಸೋಲ್ಲ. ಆದರೆ ಅವನಿಂದ ದೂರ ಇದ್ದೀನಿ ಎಂಬ ಗಿಲ್ಟ್‌ನಿಂದಾಗಿ ಹೆಚ್ಚಿನ ಅಟ್ಯಾಚ್‌ಮೆಂಟ್‌ಗಾಗಿ ಪ್ರಯತ್ನಿಸಿರ್ತಾನೆ. ಅವನೊಂದಿಗೆ ಹೆಚ್ಚಿಗೆ ತನ್ನ ಫೀಲಿಂಗ್ಸ್ ಶೇರ್ ಮಾಡಿಕೊಳ್ಳುತ್ತಿದ್ದ.

ಅದರಿಂದಾಗಿ ಒಟ್ಟಿಗೆ ಚಿನ್ನುನಲ್ಲಿ ಒಂದು ವಿಷಯ ಸ್ಥಿರಪಟ್ಟಿತು. ಅಪ್ಪ ತನಗೋಸ್ಕರ ದೇಶವಲ್ಲದ ದೇಶದಲ್ಲಿ ಕಷ್ಟಪಡುತ್ತಿದ್ದಾನೆ. ಹಣ ಗಳಿಸುತ್ತಿದ್ದಾನೆ. ಆತ ಅಷ್ಟು ಕಷ್ಟಪಡುತ್ತಿರುವುದರಿಂದ ತಾನೂ ಅಷ್ಟೇ ಕಷ್ಟಪಡಬೇಕು. ಅಂದರೆ ತುಂಬಾ ಚೆನ್ನಾಗಿ ಓದಬೇಕು. ರ್‍ಯಾಂಕು ಬರಬೇಕು. ಇನ್ನು ಅಮ್ಮ ಅಪ್ಪನ ಪ್ರಾಪರ್ಟಿ ಆದ್ದರಿಂದ ಆಕೇನ ತುಂಬಾ ಚೆನ್ನಾಗಿ ನೋಡಿಕೋಬೇಕು. ಅಂದರೆ ಕಾವಲು ಕಾಯಬೇಕು. ವಾಪಸು ಬಂದಾಗ ತಿರುಗಿ ಅಪ್ಪನಿಗೆ ಒಪ್ಪಿಸಬೇಕು. ನಿಮಗೆ ಹೇಳಿದರೆ ಆಶ್ಚರ್ಯಪಡ್ತೀರಿ ನೀವು. ಇದು ಎಲ್ಲೀವರೆಗೂ ಹೋಗಿ ತಲುಪಿತೆಂದರೆ ನಾನು ಅವನ ಅಪ್ಪನ ಹತ್ತಿರ ಬಿಟ್ಟು ಬೇರ್‍ಯಾವ ಗಂಡಸರ ಹತ್ತಿರ ಮಾತಾಡಿದರೂ ಅವನು ಟಾಲರೇಟ್ ಮಾಡದ ಸ್ಥಿತಿಗೆ ತಲುಪಿಬಿಟ್ಟ...

ಹೊಸದರಲ್ಲಿ ಅವನು ಪದೇ ಪದೇ ಫೋನ್ ಮಾಡಿ ನನ್ನ ವೇರ್ ಎಬೌಟ್ಸ್ ಕೇಳುತ್ತಿದ್ದರೆ ನನ್ನೆಡೆಗಿನ ಕನ್ಸರ್ನ್‌ನಿಂದಾಗಿ ಹಾಗೆ ಮಾಡ್ತಿರಬೇಕು ಅಂದ್ಕೊಳ್ತಿದ್ದೆ. ಅಲ್ಲ. ನನ್ನ ಬಗ್ಗೆ ಚೆಕಿಂಗ್ ಅಂತ ಗೊತ್ತಾಯ್ತು. ತಾಯಿಯನ್ನು ಅನುಮಾನಿಸೋ ಮಗ. ನೀವು ನಂಬಲ್ಲ. ನನ್ನ ಮೇಲ್